ಒಟ್ಟು ವರ್ಚುಯಲ್ ಪ್ರಪಂಚದಲ್ಲಿದ್ದ ಎಲ್ಲ ದಾಖಲೆಗಳೂ ಅವರ ಲೆಕ್ಕದ ಪುಸ್ತಕದಲ್ಲಿ ಅವರದೇ ಕೈಬರಹದಲ್ಲಿ ಎಂಟ್ರಿ ಆಗದೇ ಇದ್ದಲ್ಲಿ ಅವರಿಗೆ ಸಮಾಧಾನವಾಗುತ್ತಲೇ ಇರಲಿಲ್ಲ.

ಅವರ ಕೊನೆಯ ದಿನಗಳಲ್ಲಿ ತೀರಾ ನಿತ್ರಾಣವಾಗಿದ್ದರು. ಇನ್ನೂರು ರೂಪಾಯಿಯ ಚೆಕ್ಕನ್ನು ಕೂಡ ಸಾಲಿನಲ್ಲಿ ನಿಂತು ಡಿಪಾಸಿಟ್ ಮಾಡಿ ಅದನ್ನು ಪಾಸ್ ಬುಕ್ಕಿನಲ್ಲಿ ಎಂಟ್ರಿ ಹಾಕಿಸದೇ ಹೋದರೆ ನಮ್ಮಪ್ಪನಿಗೆ ತಿಂದ ಅನ್ನ ಕರಗುತ್ತಿರಲಿಲ್ಲ, ನಿದ್ರೆ ಬರುತ್ತಿರಲಿಲ್ಲ. ಈ ನಡುವೆ ಅಪ್ಪನ ಆರೋಗ್ಯವೂ ಹದಗೆಡುತ್ತಿದ್ದುದರಿಂದ ಅವರಿಗೆ ಕೈಲಾಗುವುದಿಲ್ಲ ಎಂದು ನಾವು ಎಲ್ಲವನ್ನೂ ಇಂಟರ್ನೆಟ್ ಬ್ಯಾಂಕಿಂಗ್ ವ್ಯವಸ್ಥೆ ಮಾಡಿಸಿ ಬ್ಯಾಂಕಿನಿಂದಲೇ ಬಿಎಸ್‌ಎನ್‌ಎಲ್, ಬೆಸ್ಕಾಮ್, ನೀರಿನ ಬಿಲ್ಲು ಎಲ್ಲವನ್ನೂ ಇಸಿಎಸ್ ಮೂಲಕ ನೇರವಾಗಿ ಕಟ್ಟುವ ವ್ಯವಸ್ಥೆ ಮಾಡಿ, ನಮ್ಮ ಮನೆಯಲ್ಲಿಯೇ ಇದ್ದು ಅಪ್ಪ, ಅಮ್ಮನಿಗೆ ಎಲ್ಲ ರೀತಿಯಲ್ಲಿಯೂ ಸಹಾಯ ಮಾಡುತ್ತಿದ್ದ ನಮ್ಮ ದೊಡ್ಡಪ್ಪನ ಮಗನಿಗೆ ಮನೆಯ ಉಸ್ತುವಾರಿಯನ್ನು ವಹಿಸಿದ್ದೆವು. ಅಪ್ಪನಿಗೆ ನಾಲ್ಕು ಹೆಜ್ಜೆ ನಡೆಯಲೂ ಆಗುತ್ತಿರಲಿಲ್ಲ. ಆದರೂ ಮನೆಯ ಯಜಮಾನಿಕೆಯನ್ನು ನಡೆಸಿಕೊಂಡು ಹೋಗಲೇಬೇಕು ಎಂಬ ಆಸೆ ಅವರಿಗಿತ್ತು. ಏನೂ ಆಗದೇ ಮನೆಯ ಕಟ್ಟೆಯ ಮೇಲೆ ಏದುಸಿರು ಬಿಡುತ್ತಾ ಕೂತಿರುತ್ತಿದ್ದವರನ್ನು ಯಾರಾದರೂ 'ಹೇಗಿದ್ದೀರಿ ರಂಗನಾಥರಾಯರೇ?' ಎಂದು ಕೇಳಿದರೆ ನಮ್ಮ ದೊಡ್ಡಪ್ಪನ ಮಗನನ್ನು ತೋರಿಸಿ 'ಮನೆಯಲ್ಲಿ ಈಗ ರಾಷ್ಟ್ರಪತಿ ಆಡಳಿತ, ಉಸ್ತುವಾರಿ ಸರಕಾರ' ಎಂದು ಕಿಚಾಯಿಸುತ್ತಿದ್ದರು.

ನಮ್ಮ ಅಪ್ಪ ಅಮ್ಮಂದಿರಿಗೆ ಅವರ ಕೊನೆಗಾಲದಲ್ಲಿ ನಾವ್ಯಾಕೆ ಕ್ರೂರಿಗಳಾಗುತ್ತೇವೆ ಎಂಬ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ. ಹತ್ತಿರವಿಲ್ಲ, ಬೇಕಾದ ಗಮನವನ್ನು ನಾವು ಕೊಡಲಾಗುತ್ತಿಲ್ಲ ಎಂಬ ಸುಪ್ತ ಪಾಪಪ್ರಜ್ಞೆ ಕೂಡ ಸಿಟ್ಟಾಗಿ ಪ್ರೊಜೆಕ್ಟ್ ಆಗಬಹುದು. ಅಪ್ಪ ಏನಿಲ್ಲ ಎಂದರೂ ಕಡೆಯಪಕ್ಷ ಅರವತ್ತು ವರ್ಷವಾದರೂ ನಶ್ಯ ಹಾಕಿದ್ದರು. ಏನು ಮಾಡಿದರೂ ಅದನ್ನು ನಾವು ಬಿಡಿಸಲಾಗಲಿಲ್ಲ. ಅಪ್ಪನಿಗೆ ಕೊಂಚ ಕೆಮ್ಮು, ನೆಗಡಿಯಾದರೂ 'ನೀನು ನಶ್ಯ ಹಾಕುವುದರಿಂದಲೇ ಹೀಗಾಗಿದ್ದು' ಎಂದು ನಾವೆಲ್ಲ ಅವರ ಸಕಲ ಕಾಯಿಲೆಗಳಿಗೆ ಅಂಬಾಳ್ ಆಫೀಸರರನ್ನೇ ಗುರಿಮಾಡಿ ಮೂದಲಿಸುತ್ತಿದ್ದೆವು. ಅಪ್ಪನಿಗೆ ಕೈಕಾಲಾಡದೇ ಇದ್ದಾಗ ಅವರಿಗೆ ನಶ್ಯವನ್ನು ಸ್ಮಗಲ್ ಮಾಡಿಕೊಡುತ್ತಿದ್ದುದು ನಮ್ಮನೆಯ ಡ್ರೈವರ್‌ಗಳು. ಅದು ನಮಗೆ ಗೊತ್ತಾದರೆ ಅವರನ್ನು ಮತ್ತೆ ಬಯ್ಯುತ್ತೇವೆ ಎಂದು ಅದರ ಖರ್ಚನ್ನು ಮತ್ತು ಆಗಾಗ್ಗೆ ಇಸ್ಪೀಟಾಡಿ ಕಳೆದ ದುಡ್ಡಿನ ಲೆಕ್ಕವನ್ನು 'ಇತರೇ ಖರ್ಚು' ಎಂಬ ಲೆಕ್ಕದಲ್ಲಿ ಅಪ್ಪ ಸೇರಿಸುತ್ತಿದ್ದಾಗ ಒಂದು ಕಾಲದಲ್ಲಿ ಇಂತವೆಲ್ಲವನ್ನೂ ರಾಜಾರೋಷವಾಗಿ ಐಟಮೈಜ್ ಮಾಡುತ್ತಿದ್ದ ಅಪ್ಪನನ್ನು ನಾನೇ ಲೆಕ್ಕ ತಪ್ಪಿಸಿದನಾ ಎಂಬ ಕೊರಗು ಕಾಡುತ್ತಲೇ ಇರುತ್ತದೆ.

## ಗುರುಪ್ರಸಾದ ಕಾಗಿನೆಲೆ

ಹುಟ್ಟಿದ್ದು ಶಿವಮೊಗ್ಗ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್ ಮತ್ತು ಎಂಡಿ ಪದವಿ. ಡೆಟ್ರಾಯ್ಟ್‌ನ ವೇಯ್ನ್ ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೋಟಾ ರಾಜ್ಯದ ರಾಚೆಸ್ಟರ್‌ನಲ್ಲಿ ವಾಸ. ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ವೈದ್ಯನಾಗಿ ಕೆಲಸ. 'ನಿರ್ಗುಣ' (ಕಥಾಸಂಕಲನ), 'ವೈದ್ಯ, ಮತ್ತೊಬ್ಬ' (ಲೇಖನ ಸಂಗ್ರಹ) 'ಗುಣ', 'ಹಿಜಾಬ್' (ಕಾದಂಬರಿಗಳು), 'ಆಚೀಚೆಯ ಕಥೆಗಳು' (ಸಂಪಾದಿತ ಕಥಾಸಂಕಲನ)– ಪ್ರಕಟಿತ ಕೃತಿಗಳು.